

ಕಲಬುರ್ಗಿಯ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸಮಾಜ ವಿಜ್ಞಾನ ಜನಪ್ರಿಯ ಉಪನ್ಯಾಸ ಮಾಲಿಕೆಯಲ್ಲಿ ಕುಲಸಚಿವ ಪ್ರೊ.ದಯಾನಂದ ಅಗಸರ ಮಾತನಾಡಿದರು

# ಅಭಿವೃದ್ಧಿಗೆ ಸಮಾಜ ವಿಜ್ಞಾನ ಅಧ್ಯಯನ ಅಗತ್ಯ

ಕಲಬುರ್ಗಿ: ಸಮಾಜದ ಅಭಿವೃದ್ಧಿಗೆ ಸಮಾಜ ವಿಜ್ಞಾನದ ಅಧ್ಯಯನ ಅವಶ್ಯ. ವಿದ್ಯಾರ್ಥಿಗಳು ವಿವಿಧ ವಿಷಯಗಳನ್ನು ಚಿಂತನೆಗೆ ಒಳಪಡಿಸುವ ಮಾರ್ಗ ಅರಿತುಗೊಳ್ಳಬೇಕು ಎಂದು ಗುಲಬರ್ಗಾ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ದಯಾನಂದ ಅಗಸರ ಹೇಳಿದರು.

ಇಲ್ಲಿಯ ಗುಲಬರ್ಗಾ ವಿಶ್ವವಿದ್ಯಾಲಯದ ಅಂಬೇಡ್ಕರ್ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ 'ಸಮಾಜ ವಿಜ್ಞಾನ ಜನಪ್ರಿಯ ಉಪನ್ಯಾಸ ಮಾಲಿಕೆ'ಯಲ್ಲಿ ಅವರು ಮಾತನಾಡಿದರು.

ಸ್ನಾತಕೋತ್ತರ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಈ ಮಾಲಿಕೆ ಆಯೋಜಿಸಲಾಗಿದೆ. ಬೋಧಕರು ಮತ್ತು ವಿದ್ಯಾರ್ಥಿಗಳ ಮಧ್ಯೆ ಉತ್ತಮ ಸಂಬಂಧ ವೃದ್ಧಿ ಹಾಗೂ ವಿದ್ಯಾರ್ಥಿಗಳ ವೈಜ್ಞಾನಿಕ ಚಿಂತನೆ, ವೈಚಾರಿಕ ದೃಷ್ಟಿಕೋನ ಪ್ರೋತ್ಸಾಹಿಸಲು ಇದು ನೆರವಾಗಲಿದೆ ಎಂದರು.

ಸಮಾಜ ವಿಜ್ಞಾನ ನಿಕಾಯದ ಡೀನ್ ಪ್ರೊ.ಎನ್. ಪಾರ್ವತಮ್ಮ ಅವರು 'ಗ್ರಂಥಾಲಯ-ಜ್ಞಾನದ ಹೆಬ್ಬಾಗಿಲು' ಕುರಿತು ಮಾತನಾಡಿ, 'ಸಂಶೋಧನೆ ಮತ್ತು ಅಧ್ಯಯನಗಳ ಮಾಹಿತಿ ಸಂಗ್ರಹಣೆಯನ್ನು ವೈಜ್ಞಾನಿಕವಾಗಿ ಗ್ರಂಥಾಲಯಗಳು ನಿರ್ವಹಿಸುತ್ತವೆ. ವಿದ್ಯಾರ್ಥಿಗಳಿಗೆ ಹೊಸ ವಿಷಯ ತಲುಪಿಸಲು ವಿದ್ಯುನ್ಮಾನ ಮಾಹಿತಿ ಕೇಂದ್ರಗಳಾಗಿ ಗ್ರಂಥಾಲಯಗಳು ಅತ್ಯುತ್ತಮ ಕಾರ್ಯನಿರ್ವಹಿಸುತ್ತಿದ್ದು, ಇದರ ಸದುಪಯೋಗ ಪಡೆಯಬೇಕು' ಎಂದರು.

ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ.ಎಸ್.ಎ. ಪಾಳೇಕರ್ ಅವರು 'ಭಾರತ ಸಂವಿಧಾನ' ಕುರಿತು ಮಾತನಾಡಿ, ನಮ್ಮ ದೇಶದಲ್ಲಿ ಸರ್ವರೂ ಸಮಾನರು ಎಂಬ ದೃಷ್ಟಿಯಿಂದ ಪ್ರಮುಖವಾದ ಆರು ಮೂಲಭೂತ ಹಕ್ಕುಗಳನ್ನು ನೀಡಲಾಗಿದೆ ಎಂದರು. ಈಗ ಪ್ರಜಾಪ್ರಭುತ್ವ ಎದುರಿಸುತ್ತಿರುವ ಸವಾಲುಗಳ ಕುರಿತು ಚರ್ಚಿಸಿದರು.

ಹಣಕಾಸು ಅಧಿಕಾರಿ ಎಸ್.ಎಸ್. ದಿವಾಕರ್ ಅವರು 'ಇತಿಹಾಸದ ಮಹತ್ವ' ಕುರಿತು ಮಾತನಾಡಿ, ಇತಿಹಾಸ ಎಂದರೆ ಉಳ್ಳವರು ಮತ್ತು ಇಲ್ಲದವರ ನಡುವಿನ ಹೋರಾಟ. ಯಾರು ಇತಿಹಾಸ ಮರೆಯುತ್ತಾರೋ ಅವರು ಇತಿಹಾಸ ಸೃಷ್ಟಿಸಲಾರರು ಎಂದರು.

ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಪ್ರೊ.ಬಿ.ಎಸ್. ಮಹೇಶ್ವರಪ್ಪ ಅವರು 'ಗ್ರಹಿಕೆಯ ಕೌಶಲ' ಹಾಗೂ ಮನೋವಿಜ್ಞಾನ ವಿಭಾಗದ ಪ್ರಾಧ್ಯಾಪಕ ಶಿವಕುಮಾರ ಚಂಗಟೆ ಅವರು, 'ಬಾನಾಮತಿ-ಮಿಥ್ಯ ಮತ್ತು ಸತ್ಯ' ಕುರಿತು ಮಾತನಾಡಿದರು.

ವಿದ್ಯಾರ್ಥಿ ಕಲ್ಯಾಣಾಧಿಕಾರಿ ಪ್ರೊ.ಕೆ.ಸಿದ್ದಪ್ಪ ವಂದಿಸಿದರು. ವಿಜ್ಞಾನ ನಿಕಾಯದ ಡೀನ್, ಉಪನ್ಯಾಸ ಮಾಲಿಕೆಯ ಸಂಯೋಜಕ ಪ್ರೊ.ವೆಂಕಟರಾಮನ್ ನಿರೂಪಿಸಿದರು.

ಬೆಂಗಳೂರು: ಸ್ಟಾಂಡರ್ಡ್ ಚಿನ್ನ 10 ಗ್ರಾಂಗೆ ₹ 31,832

ಪ್ರಜಾವಾಣಿ

ಗುರುವಾರ • ಸೆಪ್ಟೆಂಬರ್ 8, 2016

REGISTRAR
GULBARGA UNIVERSITY
GULBARGA.